ಎಂದು ವಿಪಿನ್‌ನ ತಲೆಗೆ ಮೊಟಕಿದ ಅವಳು ಪಕ್ಕದ ಗೋಡೆಮೂಲೆಗೆ ಪಿಚಿಕ್‌ನೆ ಕೆಂಪು ಎಂಜಲನ್ನು ಉಗಿದಳು. ಕಿಸ ಕಿಸ ನಗುತ್ತಾ ತಲೆ ಮುಟ್ಟಿಕೊಂಡ ವಿಪಿನ್ ಸದಾನ ಕೈಹಿಡಿದುಕೊಂಡು ಮತ್ತೂ ಮೇಲೆರತೊಡಗಿದ. ಸದಾನಿಗೆ ಆ ಹೆಂಗಸಿನ ಕವಳ ಕೆಂಪಿನ ಹುಳುಕು ಹಲ್ಲು ಕಂಡಾಗಲೇ ರಮ್ಮಿನ ನಶೆ ಅರ್ಧ ಇಳಿದಿತ್ತು. ಉಚ್ಚೆಯೋ ಬೆವರೋ, ಪ್ಲಾಸ್ಟಿಕ್ ಸುಟ್ಟ ವಾಸನೆಯೋ, ಕೊಚ್ಚೆಯೋ ಎಲ್ಲ ಮಿಶ್ರಣಗೊಂಡ ದುರ್ನಾತ ಅಲ್ಲೆಲ್ಲ ಅಮರಿಕೊಂಡಿತ್ತು. ಮೆಟ್ಟಿಲುಗಳ ಮೇಲೆಲ್ಲ ಹರಿದ ಜರ್ದಾ ಪಾಕೀಟುಗಳು ಚೆಲ್ಲಿದ್ದವು. 'ಹೆದ್ರಿಕೆ ಆಗ್ತಿದೆ. ವಾಪಸ್ ಹೋಗುವಾ...' ಎಂಬ ಮಾತು ಕತ್ತಿನವರೆಗೂ ಬಂದರೂ 'ನಾಮರ್ದ ಹೈ ಕ್ಯಾ?...' ಎಂದು ವಿಪಿನ್ ನಕ್ಕುಬಿಡ್ತಾನೇನೋ ಎಂದುಕೊಂಡು ಅವನನ್ನು ಸುಮ್ಮನೆ ಹಿಂಬಾಲಿಸಿದ.

ಎರಡನೇ ಮಹಡಿಯ ಯಾವುದೋ ರೂಮಿನ ಬಾಗಿಲೆದುರು ಸದಾನನ್ನು ನಿಲ್ಲಿಸಿ, ಗಸಗಸ ಕೈ ತಿಕ್ಕಿಕೊಂಡು 'ಮಜ್ಜಾ ಆಯೇಗಾ' ಎಂದು ಕಣ್ ಮಿಟುಕಿಸಿ ಒಳಗೆ ತಳ್ಳಿದ ವಿಪಿನ್ ತಾನು ಪಕ್ಕದ ಕೋಣೆ ಸೇರಿಕೊಂಡಿದ್ದ.

ಒಮ್ಮೆಲೇ ಕೋಣೆಯೊಳಗೆ ಬಂದು ನಿಂತ ಸದಾನ ಕಾಲುಗಳು ಸಣ್ಣಗೆ ನಡುಗುತ್ತಿದ್ದವು. ಮಬ್ಬು ಬೆಳಕು. ಒಂದು ಮಂಚ. ಅದರ ಅತ್ತಿತ್ತ ಇಬ್ಬರು ಒತ್ತೊತ್ತು ನಿಲ್ಲುವಷ್ಟು ಮಾತ್ರ ಜಾಗದ ಸಣ್ಣ ಕೋಣೆ ಅದು. ಮತ್ತೊಂದು ತುದಿಗೆ ಕನ್ನಡಿ ಎದುರು ನಿಂತಿದ್ದ ಹೆಂಗಸು ಬಾಗಿಲು ಸದ್ದಾಗಿದ್ದೇ ಕೈಯಲ್ಲಿನ ಬಾಚಣಿಕೆ ಸಮೇತ ಇತ್ತ ತಿರುಗಿದಳು. ಇವನನ್ನು ನೋಡಿ ಯಾವ ಪ್ರತಿಕ್ರಿಯೆಯನ್ನೂ ತೋರದೆ ಬಾಚಣಿಕೆ ಅಲ್ಲಿಟ್ಟು ನಿಧಾನ ತೂಗು ನಡಿಗೆಯಲ್ಲಿ ಇತ್ತ ಬಂದಳು. ಎದುರು ನಿಂತು ಕೈಗಳನ್ನು ಎತ್ತಿ, ಬೆನ್ನಮೇಲೆ ಹರಡಿದ್ದ ಕೂದಲನ್ನು ಮುಷ್ಟಿಯಲ್ಲಿ ಹಿಡಿದು ಮುಡಿಕಟ್ಟಿಕೊಳ್ಳುವಾಗ ಕಂಕುಳ ಸಂದಿಯಲ್ಲಿ ಗೋಲ ಜಾಗಕ್ಕೆ ಬಟ್ಟೆ ಒದ್ದೆಯಾಗಿರುವುದು ಆ ಮಬ್ಬು ಬೆಳಕಲ್ಲೂ ಕಾಣಿಸಿತು. ದಪ್ಪ ತೋಳನ್ನು ಬಿಗಿದಪ್ಪಿದ್ದ ಚೂಡಿದಾರದ ಗಿಡ್ಡ ಕೈಯಿಂದ ಉದ್ದುದ್ದ ಕೂದಲುಗಳು ಹೊರಗಿಣುಕುತ್ತಿದ್ದವು.

ಅದೇ ತಾತ್ಸಾರದಿಂದ ಅವಳು ಹೂಂ ಗುಟ್ಟಿ ತಿರುಗಿ ಹೋಗಿ ಮಂಚಕ್ಕೆ ಒರಗಿ ಕೂತು ಇವನನ್ನೇ ನೋಡತೊಡಗಿದಳು. ಆ ನೋಟದಲ್ಲಿ ಆಹ್ವಾನ ಮತ್ತು ಬೇಗ ಮುಗಿಸಿಕೊಂಡು ತೊಲಗು ಎಂಬ ತಾತ್ಸಾರ ಎರಡೂ ಇದ್ದಂತಿತ್ತು. ರಮ್ಮಿನ ನಶೆಯೆಲ್ಲಾ ಇಳಿದು ಕಂಗಾಲಾಗಿದ್ದರೂ ಆ ಆತಂಕದಲ್ಲೇ ಅವಳ ವಯಸ್ಸು ಎಷ್ಟಿರಬಹುದು ಎಂದು ಊಹಿಸತೊಡಗಿದ. ಬಣ್ಣ ಹಚ್ಚಿದ ಮುಖದ ಮೇಲಿನ ಗೆರೆಗಳು ವಯದ ಗುಟ್ಟು ಬಿಟ್ಟುಕೊಡಲಿಲ್ಲ.

ಹೊರಗಿನ ಬೀದಿ ದೀಪದ ಕೆಂಬಣ್ಣವು ಸಣ್ಣ ಕಿಟಕಿಯಿಂದ ಹಾದು ಬಂದು ಮಂಚದ ಇನ್ನರ್ಧಕ್ಕೆ ಚೆಲ್ಲಿತ್ತು. ಸದಾ ನಿಧಾನವಾಗಿ ಹೋಗಿ ಮಂಚದ ಆ ತುದಿಗೆ ಕೂತ. ಮುಖದ ಮೇಲೆ ಹೊರಗಿನ ದೀಪದ ಬೆಳಕು ಬಿದ್ದಾಗ ಸಂಕೋಚದಿಂದಲೇ ಸರಿದಾಡಿ ಕೊನೆಗೆ ಅಲ್ಲೆ ಪಕ್ಕದಲ್ಲಿ ಒಗೆದಂತೆ ಬಿದ್ದುಕೊಂಡಿದ್ದ ಅವಳ ವ್ಯಾನಿಟಿ ಬ್ಯಾಗ್ ನೋಡುತ್ತಾ ಕೂತ.

ಆ ಬೆಳಕಿನಲ್ಲಿ ಅವನ ಮುಖವನ್ನು ನೋಡಿದ್ದೇ ಆ ಹೆಂಗಸಿನ ಮುಖದಲ್ಲಿನ ತಾತ್ಸಾರ ಭಾವ ಮರೆಯಾಗಿ ಚುರುಕಾಗಿ ಎದ್ದು ಕೂತಳು. ತನ್ನ ಮುಖವನ್ನು ಮತ್ತೆ ಮತ್ತೆ ನಿರುಕಿಸಿದಾಗ ಅವನು ಸಂಕೋಚದಿಂದ ಕಣ್ಣು ತಪ್ಪಿಸಿ ಗೋಡೆಯ ಮೇಲಿನ ಅರೆಬೆತ್ತಲ ಚಿತ್ರಗಳ ಮೇಲೆ ದೃಷ್ಟಿನೆಟ್ಟ. ಹೆಂಗಸು ದಿಗ್ಗನೆದ್ದು ಕೋಣೆಯ ದೀಪ ಹಾಕಿದಳು. ಸದಾ ಒಮ್ಮೆಲೇ ಆ ಬೆಳಕನ್ನು ಎದುರಿಸಲೂ ಆಗದೆ ಮುಖ ಮುಚ್ಚಿಕೊಳ್ಳಲೂ ಆಗದೇ ಚಡಪಡಿಸಿದ.